ಸಚಿವರು):

ಅ) 2291.33 ಲಕ್ಷ ರೂ.ಗಳು

ಆ) 230.002 ಲಕ್ಷ ರೂ.ಗಳನ್ನು ಪ್ರಸಕ್ತ ಸಾಲಿನ ಜನವರಿ ಮಾಹೆಯ ಅಂತ್ಯದವರೆಗೆ ಖರ್ಚು ಮಾಡಲಾಗಿದೆ.

ಇ) 138.237 ಲಕ್ಷ ರೂ.ಗಳು

ಈ) 66.147 ಲಕ್ಷ ರೂ.ಗಳು (ಜನವರಿ ಮಾಹೆಯ ಅಂತ್ಯದವರೆಗೆ)

ಹಾಸನ ಜಿಲ್ಲೆಗೆ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ

169 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಗೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ 1990-91ನೇ ಸಾಲಿಗೆ ಒದಗಿಸಿದ ಹಣವೆಷ್ಟು?*

ಆ) *ಇಲ್ಲಿಯವರೆಗೆ ಖರ್ಚಾಗಿರುವ ಒಟ್ಟು ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಇ) *ಸದರಿ ಯೋಜನೆಯಲ್ಲಿ ಹಣದ ದುರುಪಯೋಗವಾಗಿದ್ದ ಬಗ್ಗೆ ಸಿಓಡಿ ತನಿಖೆಯು ಈಗ ಯಾವ ಹಂತದಲ್ಲಿದೆ?*

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 81.860 ಲಕ್ಷ ರೂ.ಗಳು

ಆ) ತಾಲ್ಲೂಕುವಾರು ಖರ್ಚಿನ ವಿವರ ಈ ಕೆಳಕಂಡಂತಿದೆ

1. ಹಾಸನ-10.622 ಲಕ್ಷ ರೂ.ಗಳು
2. ಆಲೂರು-5.551 ಲಕ್ಷ ರೂ.ಗಳು
3. ಬೇಲೂರು-10.653 ಲಕ್ಷ ರೂ.ಗಳು
4. ಸಕಲೇಶಪುರ-19.751 ಲಕ್ಷ ರೂ.ಗಳು

ಒಟ್ಟು46,577 ಲಕ್ಷ ರೂ.ಗಳು.

ಇ) ತನಿಖೆಯು ಅಂತಿಮ ಘಟ್ಟದಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವುದು

174 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡದಲ್ಲಿ ಜಿಲ್ಲೆಯಲ್ಲಿ ಕಳೆದ 20-25 ವರ್ಷಗಳಿಂದ ಕಡು ಬಡವರು, ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಸಾಗುವಳಿ ಮಾಡುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರ ಈ ಭೂಮಿಯನ್ನು ಸಕ್ರಮಗೊಳಿಸಿ ಈಗ ಅತಿಕ್ರಮಣ ಮಾಡುತ್ತಿರುವವರ ಹೆಸರಿಗೆ ನೀಡಲು ಕ್ರಮ ಕೈಗೊಳ್ಳುತ್ತದೆಯೇ?*

ಇ) *ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಇ.ಟಿ. ಶಂಬುಸಾಫ್ (ಅರಣ್ಯ ರಾಜ್ಯ ಸಚಿವರು) :

ಅ) ಹೌದು, ತಿಳಿದಿದೆ.

ಆ) ದಿನಾಂಕ : 27-4-1978ಕ್ಕಿಂತ ಮೊದಲು ಅತಿಕ್ರಮಣ ಮಾಡಿದ್ದಲ್ಲಿ ಅಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಅರಣ್ಯ ಭೂಮಿಯ ಅತಿಕ್ರಮಣದ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ

428 - ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1978ರ ಏಪ್ರಿಲ್ 27ಕ್ಕಿಂತ ಮುಂಚೆ ಅರಣ್ಯ ಭೂಮಿ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ : ಪಂಗಡ ಮತ್ತು ಬಡ ಕೃಷಿಕರ ಜಮೀನುಗಳನ್ನು ಮೂರು ಎಕರೆಗೆ ಮೀರದಂತೆ ಸಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಸರ್ಕಾರ ಇಂದಿನವರೆಗೆ ಈ ಅತಿಕ್ರಮಣ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವ ಸಲುವಾಗಿ ಯಾವ ಯಾವ ರೂಪರೇಶೆಗಳನ್ನು ತಯಾರಿಸಿದೆ?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ನಿಜ

ಆ) ಸಕ್ರಮಗೊಳಿಸುವ ನಿರ್ಧಾರ ಆದ ಮೇಲೆ ಈಗಾಗಲೇ ಗುರುತಿಸಲಾಗಿರುವ ಅತಿಕ್ರಮಣಗಳ ಪ್ರಸ್ತಾವನೆಗಳನ್ನು 1980ರ ಅರಣ್ಯ ಸಂರಕ್ಷಣಾ ಅಧಿನಿಯಮದಂತೆ ಭಾರತ ಸರ್ಕಾರಕ್ಕೆ ಕಳುಹಿಸಿ ಅವರು ಒಪ್ಪಿದ ನಂತರ ಸಕ್ರಮಗೊಳಿಸಲಾಗುವುದು. ಈ ಬಗ್ಗೆ ರೂಪರೇಶೆಗಳನ್ನು ಪರಿಶೀಲಿಸಲಾಗುತ್ತಿದೆ.

ರಾಜ್ಯಕ್ಕೆ ಅಗತ್ಯವಿರುವ ಪಡಿತರ ವಸ್ತುಗಳು ಹಾಗೂ ಡೀಸೆಲ್‌ನ ಪ್ರಮಾಣವನ್ನು ಹೆಚ್ಚಿಸುವಲ್ಲಿ ಕೇಂದ್ರದ ಮೇಲೆ ಒತ್ತಡ ತರುವ ಬಗ್ಗೆ

640 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಪ್ರತಿ ತಿಂಗಳು ಅಗತ್ಯವಿರುವ ಸಕ್ಕರೆ, ಅಕ್ಕಿ, ಗೋಧಿ ಪಾಮೋಲಿನ್ ಆಯಿಲ್ ಮತ್ತು ಡೀಸೆಲ್ ಪ್ರಮಾಣವೆಷ್ಟು?

ಆ) ಕಳೆದ ಮೂರು ತಿಂಗಳಿಂದ ರಾಜ್ಯಕ್ಕೆ ಸರಬರಾಜಾಗಿರುವ ಮೇಲ್ಕಂಡ ಪಡಿತರ ವಸ್ತುಗಳ ಹಾಗೂ ಡೀಸೆಲ್ ಪ್ರಮಾಣವೆಷ್ಟು?

ಇ) ಪ್ರತಿ ತಿಂಗಳು ಮೇಲ್ಕಂಡ ಪಡಿತರ ವಸ್ತುಗಳು ಹಾಗೂ ಡೀಸೆಲ್‌ನ ವಿತರಣೆ ಪ್ರಮಾಣದಲ್ಲಿ ಎಷ್ಟು ಕಡಿಮೆಯಾಗಿದೆ?

ಈ) ಈ ಪ್ರೋತಾವನ್ನು ಸರಿಪಡಿಸಲು ರಾಜ್ಯ ಸರ್ಕಾರವು ಕೇಂದ್ರದೊಡನೆ ವ್ಯವಹರಿಸಿದೆಯೇ?

ಉ) ಈ ಬಗ್ಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಏನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸಚಿವರು) :

ಅ) ತಿಂಗಳಿಗೆ 75,000 ಮೆ.ಟನ್ ಅಕ್ಕಿ 50,000 ಮೆ.ಟನ್ ಗೋಧಿ, 26,000 ಮೆ.ಟನ್ ಸಕ್ಕರೆ, 11,000 ಮೆ.ಟನ್ ಪಾಮೋಲಿನ್ ಎಣ್ಣೆ ಮತ್ತು 1,00,000 ಮೆ.ಟನ್ ಡೀಸೆಲ್ ರಾಜ್ಯಕ್ಕೆ ಅಗತ್ಯವಿರುತ್ತದೆ.